ದಿನಾಂಕ 07-12-2023 ರಂದು ಸಾಕ್ಷಿಗೆ ಪ್ರಮಾಣ ವಚನಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಪಾಟೀ ಸವಾಲು :** 2 ನೇ ಪ್ರತಿವಾದಿ ಪರ ಶ್ರೀ ಎಮ್ ಬಿ ಪಿ ವಕೀಲರಿಂದ .

2 ನೇ ಪ್ರತಿವಾದಿಯು ಹಳಿಯಾಳ ಪಟ್ಟಣದ ಪಿಶ್ ಮಾರ್ಕೆಟ್ ನಲ್ಲಿ ಕಟ್ಟಿಸಿದ ಮಳಿಗೆಗಳಿಗೆ ಸಂಬಂಧಪಟ್ಟಂತೆ ಆದ ಸಾರ್ವಜನಿಕ ಹರಾಜಿನಲ್ಲಿ ನಾನು ಭಾಗವಹಿಸಿರುತ್ತೇನೆ. ಆಗ ನನಗೆ 1 ನೇ ಮಳಿಗೆ ಹಂಚಿಕೆ ಆಯಿತು. ದಿನಾಂಕ 18-08-2013 ರಂದು ಸದರಿ ಹರಾಜು ಆಗಿರುತ್ತದೆ. ಆ ರೀತಿ ಹರಾಜು ಆದ ನಂತರ 1 ನೇ ಮಳಿಗೆಯ ಚಾವಿಯನ್ನು ನನಗೆ ನೀಡಿರುತ್ತಾರೆ ಎಂದರೆ ಸರಿ. ಆ ರೀತಿ ಚಾವಿ ಕೊಟ್ಟರೆ ಅದು ನನಗೆ ಸದರಿ ಮಳಿಗೆಯ ಸ್ವಾಧೀನ ಕೊಟ್ಟಂತೆ ಆಗುತ್ತದೆ ಎಂದರೆ ಸರಿ. ಆ ರೀತಿ ಚಾವಿ ಕೊಟ್ಟ ನಂತರ ನೀವು ಮಳಿಗೆಯ ಪ್ರವೇಶ ಮಾಡಿರುತ್ತೀರಿ ಎಂದರೆ ಸಾಕ್ಷಿಯು 1 ನೇ ಪ್ರತಿವಾದಿ ಮಳಿಗೆಯ ಬೀಗವನ್ನು ಒಡೆದ ಒಳಗೆ ಹೋಗಿರುತ್ತಾನೆ ಎನ್ನುತ್ತಾರೆ. ಆ ರೀತಿ 1 ನೇ ಪ್ರತಿವಾದಿ ಮಳಿಗೆಯನ್ನು ತನ್ನ ಸ್ವಾಧೀನಕ್ಕೆ ಪಡೆದ ನಂತರ ಸದರಿ ಮಳಿಗೆಯ ಸ್ವಾಧೀನ ಕೊಡಿಸಬೇಕೆಂದು ನಾನು 2 ನೇ ಪ್ರತಿವಾದಿಗೆ ಅರ್ಜಿ ಸಲ್ಲಿಸಿರುತ್ತೇನೆ. ಆ ರೀತಿ ನಾನು ಅರ್ಜಿ ಕೊಟ್ಟ ನಂತರ 2 ನೇ ಪ್ರತಿವಾದಿಯು 1 ನೇ ಪ್ರತಿವಾದಿಯನ್ನು ಸದರಿ ಮಳಿಗೆಯಿಂದ ಹೊರ ಹಾಕಿ ಆ ಮಳಿಗೆಗೆ ಮತ್ತೆ ಬೀಗ ಹಾಕಿ ಚಾವಿಯನ್ನು ನನಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ಆ ರೀತಿ ಮತ್ತೆ ಸದರಿ ಮಳಿಗೆಗೆ ಬೀಗ ಹಾಕಲು ಬಂದಾಗ 1 ನೇ ಪ್ರತಿವಾದಿ ಗಲಾಟೆ ಮಾಡಿರುತ್ತಾನೆ ಹಾಗೂ ಆಗ ಪೊಲೀಸರು ಅಲ್ಲಿ ಬಂದಿದ್ದರು ಎಂದರೆ ಸರಿ. ಪೊಲೀಸರ ಎದುರಿಗೆ 2 ನೇ ಪ್ರತಿವಾದಿ ಸದರಿ ಮಳಿಗೆಗೆ ಮತ್ತೆ ಬೀಗ ಹಾಕಿದರು ಎನ್ನುವುದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಆದರೆ ಅಲ್ಲಿ ಜಗಳ ಆಗಿ 1 ನೇ ಪ್ರತಿವಾದಿಯನ್ನು ಪೊಲೀಸರು ಠಾಣೆಗೆ ಕರೆದುಕೊಂಡು ಹೋಗಿರುತ್ತಾರೆ ಎನ್ನುತ್ತಾರೆ.

ನಾನು ಬಹಿರಂಗ ಹರಾಜಿನಲ್ಲಿ 1 ನೇ ಮಳಿಗೆಯನ್ನು ಪಡೆದ ನಂತರ 2 ನೇ ಪ್ರತಿವಾದಿ ಆ ಮಳಿಗೆಯ ಸ್ವಾಧೀನವನ್ನು ನನಗೆ ನೀಡಿರುತ್ತಾರೆ ಎಂದರೆ ಸರಿ. ಆ ರೀತಿ ಸದರಿ ಮಳಿಗೆಯ ಸ್ವಾಧೀನವನ್ನು ನನಗೆ ನೀಡಿದ್ದರೂ ಸಹ ನಾನು ಮಳಿಗೆಯ ಬೀಗವನ್ನು ತೆರೆದು ಅದನ್ನು ಉಪಯೋಗಿಸಲು ವಿಳಂಬ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ವಾದ ಪತ್ರದಲ್ಲಿ ನನಗೆ ಮಾಸಿಕ ರೂ. 10,000/- ಹಣ ಲುಕ್ಸಾನು ಆಗುತ್ತಿದೆ ಎಂದು ನಮೂದಿಸಿದ್ದು ಆ ರೀತಿ ಲುಕ್ಸಾನು ಆಗುತ್ತಿದೆ ಎಂದು ತೋರಿಸಲು ನನ್ನ ವಕೀಲರಿಗೆ ದಾಖಲೆ ನೀಡಿರುತ್ತೇನೆ. ನಾನು ನನ್ನ ವ್ಯವಹಾರಕ್ಕಾಗಿ ಬ್ಯಾಂಕಿನಲ್ಲಿ ಆಗಾಗ ಸಾಲ ಮಾಡುತ್ತೇನೆ ಎಂದರೆ ಸರಿ. ನಾನು 1 ನೇ ಮಳಿಗೆಯ ಮೇಲೆ ಸಾಲ ಪಡೆದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿದ್ದೇನೆ. ಆ ರೀತಿ ದಾಖಲೆ ಹಾಜರುಪಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಳಿಗೆಯನ್ನು 2 ನೇ ಪ್ರತಿವಾದಿ ನನಗೆ ನೀಡಿದ್ದರೂ ಸಹ ನಾನು ಸದರಿ ಮಳಿಗೆಯ ಸ್ವಾಧೀನವನ್ನು ಪಡೆಯಲು ವಿಫಲ ಆಗಿದ್ದರಿಂದ 2 ನೇ ಪ್ರತಿವಾದಿಯಿಂದ ನನಗೆ ಯಾವುದೇ ಹಾನಿ ಉಂಟಾಗಿಲ್ಲ ಎಂದರೆ ಸರಿಯಲ್ಲ. ಆ ಕಾರಣದಿಂದ 2 ನೇ ಪ್ರತಿವಾದಿಯು ನನಗೆ ಯಾವುದೇ ಲುಕ್ಸಾನು ಭರಿಸಲು ಬಾಧ್ಯಸ್ಥರಾಗಿರುವುದಿಲ್ಲ ಹಾಗೂ ನನಗೆ ಲುಕ್ಸಾನು ಆಗಿದೆ ಎಂದು ಹೇಳುವುದು ನಾನೇ ಸ್ವತಃ ಮಾಡಿಕೊಂಡಿರುವ ಲುಕ್ಸಾನು ಎಂದರೆ ಸರಿಯಲ್ಲ. ಆ ಕಾರಣದಿಂದ ಈ ದಾವೆ 2 ನೇ ಪ್ರತಿವಾದಿಯ ವಿರುದ್ಧ ಸುಳ್ಳು ದಾವೆ ಆಗಿರುತ್ತದೆ ಹಾಗೂ ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.